

# ದಿಂಬಿನಡಿಯಲ್ಲೊಂದು ಪಿಸ್ತೂಲ್

■ ಯಂಡಮೂರಿ ವೀರೇಂದ್ರನಾಥ್

ಕನ್ನಡಕ್ಕೆ: ಸಂಡೂರು ವೆಂಕಟೇಶ್

ಕಲೆ: ಮನೋಹರ್ ಆಚಾರ್ಯ

## ಸಂಚಿನ ಸುಳಿಯಲ್ಲಿ...

ಮರುದಿನ ಮಧ್ಯಾಹ್ನ ಮಿಜ್ರಾಡಿನ್ ಬಾರ್ಕಾಸ್ ಎಂಬ ಪ್ರದೇಶಕ್ಕೆ ಹೋದನು. ಚಾರ್ಮಿನಾರ್ ಆಚೆಗೆ ಇರುವ ಪ್ರದೇಶ. ಮಿನಿ ಸೌದಿ ಅರೇಬಿಯಾ ರೀತಿ ಇರುತ್ತದೆ. ಮತ್ತೆ ಮೂವರು ಅಲ್ಲಿದ್ದರು. ಅವನನ್ನು ಕಂಡು ಸಂಭ್ರಮದಿಂದ 'ನೀವು ಇಷ್ಟು ದೂರ ಬರ್ತೀರಿ ಅಂದು ಕೊಂಡಿರಲಿಲ್ಲ. ಭಾಯ್. ಆಶ್ಚರ್ಯ... ಸಂತೋಷ ಕೂಡಾ ಆಗಿದೆ' ಎಂದನು ಅವರಲ್ಲೊಬ್ಬ. ಮಿಜ್ರಾಡಿನ್ ಆ ಮಾತನ್ನು ಗಮನಿಸದೆ ನೇರವಾಗಿ ವಿಷಯಕ್ಕೆ ಬಂದನು. 'ಇಲ್ಲಿ ಯಾರೋ ಇನ್ಫಾರ್ಮರ್ ನಮ್ಮ ವಿಷಯಗಳನ್ನು ಪೊಲೀಸರಿಗೆ ತಿಳಿಸುತ್ತಿದ್ದಾರೆ. ನಮಗೆ ಬಹಳ ನಷ್ಟ ಆಗ್ತಾ ಇದೆ' ಎಂದನು.

'ಹೌದು ಎಷ್ಟು ಪ್ರಯತ್ನಿಸಿದರೂ ಯಾರೆಂದು ತಿಳಿಯಲಿಲ್ಲ' ಎಂದು ಅಲ್ಲಿದ್ದ ಕಮಾಂಡರ್ ಹೇಳಿದನು.

'ನಾನು ತಿಳಿದುಕೊಂಡೆ' ಎಂದನು ಮಿಜ್ರಾಡಿನ್.

ಒಮ್ಮೆಲೇ ಅಲ್ಲಿನ ವಾತಾವರಣದಲ್ಲಿ ಟೆನ್ಷನ್ ಕಾಣಿಸಿತು.

'ಯಾರು ಭಾಯ್?'

'ಇಲ್ಲಿ ಬೇಕರಿ ನಡೆಸುತ್ತಿರುವ ನನ್ನ ಸ್ನೇಹಿತ ಖಾನ್ ಅಬ್ದುಲ್ ಗಫಾರ್ ಖಾನ್...'

ಅವರೆಲ್ಲ ಸ್ಥಂಭಿತರಾದರು. ಅವರಲ್ಲೊಬ್ಬ ನಂಬದವನಂತೆ 'ಖಾನ್! ಅಂದರೆ.... ಅಂದರೆ... ಇದೆನ್ನೆಲ್ಲ ಮಾಡುತ್ತಿರುವುದು ನಮ್ಮವನೇ?' ಎಂದು ಗೊಣಗಿದನು.

'ಅವನಿಗೆ ಜಾತಿ, ಧರ್ಮ ಇಲ್ಲ, ಗುಡಿಗಳಿಗೆ, ಚರ್ಚ್‌ಗಳಿಗೆ ಹೋಗಿ ವಂದೇಮಾತರಂ ಪ್ರಾರ್ಥನೆ ಮಾಡುವ ಹುಚ್ಚು' ಎಂದನು ಮಿಜ್ರಾಡಿನ್.

'ಈ ದಿನವೇ ಅವನನ್ನು ಸಾಯಿಸೋಣ'

'ಅವನನ್ನು ಸಾಯಿಸಿದರೆ ಪೊಲೀಸ್ ದಾಳಿ ನಿಲ್ಲುತ್ತದೇನು? ನಮ್ಮೆಲ್ಲ ಎದುರಾಳಿಗಳನ್ನು ಮಣ್ಣುಗೂಡಿಸಬೇಕು'

'ಎದುರಾಳಿ?'

'ನಮ್ಮನ್ನು ಆತಂಕವಾದಿಗಳೆಂದು ಕರೆಯುವವರಿಗೆ ಎದುರಾಳಿಗಳು ಎಂದು ಹೆಸರಿಟ್ಟಿದ್ದೇನೆ'

'ಇದರ ಹಿಂದೆ ಇರುವುದು ಅವನೇ ಎಂದು ಹೇಗೆ ತಿಳಿಯಿತು ಭಾಯ್?' ಎಂದು ಕೇಳಿದನು ಅಮೀರ್, ಹೊಸದಾಗಿ ಆ ಗುಂಪಿಗೆ ಸೇರಿದ್ದವನು.

'ನಾವು ಮಾತನಾಡುತ್ತಿರುವಾಗ ಅವನಿಗೊಂದು ಕಾಲ್ ಬಂದಿತು. 'ರಾಂಗ್ ನಂಬರ್ ಎಂದು ಕಟ್ ಮಾಡಿದನು. ಹಾಗವನು ಹೇಳುತ್ತಿದ್ದಾಗ ಅವನ ಮುಖ ಗಮನಿಸುತ್ತಿದ್ದ ನನಗೆ ಅನುಮಾನ ಬಂತು. ಅವನು ಸ್ನಾನಕ್ಕೆ ಹೋಗಿದ್ದಾಗ ಆ ನಂಬರ್‌ಗೆ ಕಾಲ್ ಮಾಡಿದೆ. ಅತ್ತ ಕಡೆಯಿಂದ 'ಮೇರಾ ಭಾರತ್ ಮಹಾನ್' ಎಂದಿದ್ದು ಕೇಳಿಸಿತು. ಫೋನ್ ಇಟ್ಟುಬಿಟ್ಟೆ.

ಫೋನ್ ತೆಗೆದ ಕೂಡಲೆ 'ಮೇರಾ ಭಾರತ್ ಮಹಾನ್' ಎಂದು